(3)

**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ/33/ಆರ್‌ಐಪಿ(1)/2016

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು, 560 001.
ದಿನಾಂಕ:28-08-2020.

**ಜ್ಞಾಪನ**

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ-577ಕ್ಕೆ ಉತ್ತರಗಳನ್ನು ಕೋರಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂ: ಇಡಿ/18/ಅಅವಿ/2017, ದಿನಾಂಕ: 19.08.2020

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ, ಇವರು ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ-577ಕ್ಕೆ ತಾಂತ್ರಿಕ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಉತ್ತರಗಳನ್ನು ಕೋರಿರುತ್ತಾರೆ. ಮಾನ್ಯ ಸದಸ್ಯರು ಮಹಾಲೇಖಪಾಲರು ಈ ಇಲಾಖೆಯಲ್ಲಿ ನಡೆಸಿರುವ ಲೆಕ್ಕಪರಿಶೋಧನಾ ವರದಿಯನ್ವಯ ಆಕ್ಷೇಪಣೆ ಮಾಡಲಾಗಿರುವ ಮೊತ್ತ ಹಾಗೂ ಇದರಲ್ಲಿ ವಸೂಲಿಸಲಾಗಿರುವ ಮೊತ್ತ ಹಾಗೂ ಬಾಕಿಯಿರುವ ಮೊತ್ತದ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸಲು ತಿಳಿಸಿರುತ್ತಾರೆ.

ಸದರಿ ವರದಿಯನ್ವಯ ತುರ್ತಾಗಿ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸಬೇಕಾಗಿರುತ್ತದೆ. ಆದಕಾರಣ, ನಿಮ್ಮ ಸಂಸ್ಥೆಗೆ ಸಂಬಂಧಪಟ್ಟಂತೆ ಮಹಾಲೇಖಪಾಲರು ಲೆಕ್ಕ ತನಿಖೆ ನಡೆಸಿ ನೀಡಿರುವ ವರದಿಯನ್ವಯ ಆಕ್ಷೇಪಿತ ಹಾಗೂ ವಸೂಲಾತಿಗೆ ಸೂಚಿಸಿರುವ ಮೊತ್ತ, ಸದರಿ ಮೊತ್ತದಲ್ಲಿ ಇದುವರೆವಿಗೂ ವಸೂಲಾಗಿರುವ ಮೊತ್ತ ಮತ್ತು ಬಾಕಿಯಿರುವ ಮೊತ್ತದ ವಿವರವಾದ ಮಾಹಿತಿಯನ್ನು ಇದರೊಂದಿಗೆ ಲಗತ್ತಿಸಲಾಗಿರುವ ಅನುಬಂಧದಲ್ಲಿ ನಮೂದಿಸಿ 03 ದಿನಗಳೊಳಗಾಗಿ ಈ ಕಛೇರಿಗೆ ಕಳುಹಿಸಿಕೊಡುವುದು.

**ಆಯುಕ್ತರು**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು

28/8/2020

**ಇವರಿಗೆ,**

1. ಪ್ರಾಂಶುಪಾಲರು, ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು/ ಪಾಲಿಟೆಕ್ನಿಕ್‌ಗಳಿಗೆ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಿಗೆ.
2. ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು. (ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು).
3. ಕಛೇರಿ ಪ್ರತಿ.

ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿ ಪ್ರಶ್ನೆ ಸಂಖ್ಯೆ: 577 ಕ್ಕೆ ಅನುಬಂಧ

ವಿಶ್ವವಿದ್ಯಾಲಯದ ಹೆಸರು:

| ಕ್ರಸಂ. | ಮಹಾಲೇಖಪಾಲರು ಯಾವ ವರ್ಷದಿಂದ ತಮ್ಮ ವಿಶ್ವವಿದ್ಯಾಲಯದ ಇಲಾಖೆಯ ಲೆಕ್ಕಪರಿಶೋದನೆಯನ್ನು ಪ್ರಾರಂಭಿಸಿರುತ್ತಾರೆ. | ಇಲ್ಲಿಯವರೆಗೆ ಮಹಾಲೇಖಪಾಲರು ನೀಡಿರುವ ತಮ್ಮ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಣೆಗೆ ಮತ್ತು ವಸೂಲಾತಿಗೆ ಸೂಚಿಸಿದ ಒಟ್ಟು ಮೊತ್ತವೆಷ್ಟು ( ವರ್ಷವಾರು ವಿವರ ನೀಡುವುದು) | ಇಲ್ಲಿಯವರೆಗಿನ ಮಹಾಲೇಖಪಾಲರು ನೀಡಿರುವ ತಮ್ಮ ವಿಶ್ವವಿದ್ಯಾಲಯದ ಲೆಕ್ಕಪರಿಶೋಧನಾ ವರದಿಗಳಲ್ಲಿ ಆಕ್ಷೇಪಣೆಗೆ ಮತ್ತು ವಸೂಲಾತಿ ಖಂಡಿಕೆಗಳಿಗೆ ಕಾರಣರಾದ ವಿಶ್ವವಿದ್ಯಾಲಯದ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ವಿವರ ನೀಡುವುದು | ಇಲ್ಲಿಯವರೆಗಿನ ಮಹಾಲೇಖಪಾಲರು ನೀಡಿರುವ ಲೆಕ್ಕಪರಿಶೋಧನಾ ವರದಿಗಳಲ್ಲಿನ ವಸೂಲಾತಿ ಖಂಡಿಕೆಗಳನುಸಾರ ಸಂಬಂಧಿಸಿದ ಅಧಿಕಾರಿ /ಸಿಬ್ಬಂದಿಗಳಿಂದ ಮರು ಪಾವತಿಸಿಕೊಂಡ ಮೊತ್ತ ಎಷ್ಟು ( ಪ್ರತ್ಯೇಕ ವಿವರವನ್ನು ನೀಡುವುದು) | ಇಲ್ಲಿಯವರೆಗಿನ ಮಹಾಲೇಖಪಾಲರು ನೀಡಿರುವ ಲೆಕ್ಕಪರಿಶೋಧನಾ ವರದಿಗಳಲ್ಲಿನ ವಸೂಲಾತಿ ಖಂಡಿಕೆಗಳಲ್ಲಿ ಇನ್ನೂ ವಸೂಲಾತಿಯಾಗ ಬೇಕಾದ ಮೊತ್ತವೆಷ್ಟು | ಇಲ್ಲಿಯವರೆಗೆ ಮಹಾಲೇಖಪಾಲರು ನೀಡಿರುವ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ ಮತ್ತು ವಸೂಲಾತಿ ಖಂಡಿಕೆಗಳಿಗೆ ಕಾರಣರಾದ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಕೈಗೊಂಡ ಕಾನೂನಾತ್ಮಕ ಕ್ರಮದ ಬಗ್ಗೆ ವಿವರಗಳನ್ನು ಒದಗಿಸುವುದು. |
|---|---|---|---|---|---|---|
| ಉತ್ತರ: | | | | | | |